**<u>ಪತ್ರಿಕಾ ಪ್ರಕಟಣೆ</u>**

ಈ ದಿನ ಖಚಿತ ಮಾಹಿತಿ ಮೇರೆಗೆ ಮಂಗಳೂರು ನಗರದ ಪೂರ್ವ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರು ಬಂಟ್ಸ್ ಹಾಸ್ಟೇಲ್ ಬಳಿ ಸಾರ್ವಜನಿಕ ಸ್ಥಳ ಒಂದರಲ್ಲಿ ದಾಳಿಯನ್ನು ನಡೆಸಿ ವಿಶ್ವಕಪ್ ಪಂದ್ಯಾವಳಿಯ ಇಂದು ನಡೆಯುತ್ತಿರುವ ಆಸ್ಟ್ರೇಲಿಯಾ ಮತ್ತು ಪಾಕಿಸ್ತಾನ ನಡುವಿನ ಮ್ಯಾಚಿನ ಮೇಲೆ ಸಾರ್ವಜನಿಕರಿಂದ ಬೆಟ್ಟಿಂಗಗೆ ಹಣವನ್ನು ಪಡೆದು ಕೊಂಡಿದ್ದ ಕಿರಣ ಬಾಬು 42 ವರ್ಷ ವಾಸ ಕದ್ರಿ ಕಂಬಳ ಎಂಬುವನನ್ನು ದಸ್ತಗಿರಿ ಮಾಡಿರುತ್ತಾರೆ. ಸದರಿ ವ್ಯಕ್ತಿಯ ಬಳಿ ಬೆಟ್ಟಿಂಗೋಸ್ಕರ ಸಾರ್ವಜನಿಕರಿಂದ ಪಡೆದ ಹಣ ರೂಪಾಯಿ 1000 ವನ್ನು ವಶಪಡಿಸಿಕೊಳ್ಳಲಾಯಿತು. ಈ ಬಗ್ಗೆ ಆರೋಪಿತನ ವಿರುದ್ಧ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಈ ದಾಳಿಯು ಮಂಗಳೂರು ನಗರದ ಪೊಲೀಸ್ ಆಯುಕ್ತರಾದ ಶ್ರೀ ಅನುಪಮ್ ಅಗ್ರವಾಲ್ ಐಪಿಎಸ್ ರವರ ಮಾರ್ಗದರ್ಶನದಲ್ಲಿ ಪೊರ್ವ ಪೊಲೀಸ್ ಠಾಣೆಯ ಪಿಎಸ್ಐ ಶ್ರೀ ಯೋಗಿಶ್ವರನ್ ಮತ್ತು ಸಿಬ್ಬಂದಿಯವರಾದ ಶ್ರೀ ರಮೇಶ್ ಮತ್ತು ಶ್ರೀ ಸುರೇಶ್ ಎಂಬವರಿಂದ ನಡೆಸಲಾಯಿತು.

ಸಹಿ/-
ಪೊಲೀಸ್ ಆಯುಕ್ತರು
ಮಂಗಳೂರು ನಗರ

ದಿನಾಂಕ: 20-10-2023
ಸ್ಥಳ: ಮಂಗಳೂರು